# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 08–11–2013ರಂದು ನಡೆದ ಸಭೆಯ ನಡವಳಿಗಳು.**

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಎಸ್.ಶಶಿರೇಖಾಜಯರಾಮ್ | ಅಧ್ಯಕ್ಷರು | ಜಂಟಿ ಆಯುಕ್ತರು (ಆರೋಗ್ಯ/ಘನತ್ಯಾಜ್ಯ) |
| ಜಿ.ಮಂಜುನಾಥರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ವಿ.ವಾಗೀಶ್ | ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು |
| ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | |
| ಕೆ.ಚಂದ್ರಶೇಖರ್ | ಸದಸ್ಯರು | |
| ಎಲ್.ನಾಗರತ್ನಲೋಕೇಶ್ | ಸದಸ್ಯರು | |
| ಕವಿತಾಬಾಬುರಾಜ್ | ಸದಸ್ಯರು | |
| ಪಿ.ಎಂ.ಸರೋಜ | ಸದಸ್ಯರು | |
| ಕೆ.ಶಿವಕುಮಾರ್ | ಸದಸ್ಯರು | |

**ವಿಷಯದ ಸಂಖ್ಯೆ: ಸಾಆಸ್ಥಾಸ/23/2012-13:**

ಸಂಖ್ಯೆ: ಅ.ಆ./ಘ.ತ್ಯಾ.ನಿ./ಪಿ.ಆರ್./930/2012-13, ದಿನಾಂಕ: 07-02-2012 ರ ಅಪರ ಆಯುಕ್ತರು (ಘ.ತ್ಯಾ.ನಿ.) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಪೈಕಿ ಪ್ರತಿದಿನ 600 ಮೆ.ಟನ್ ಸಂಸ್ಕರಿಸಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲು ಹೈದರಾಬಾದ್ ಮೂಲದ ಮೆ॥ ರಾಮ್ಕಿ ಎನರ್ಜಿ ಅಂಡ್ ಎನ್‌ವೈರಾನ್‌ಮೆಂಟ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಂದು ಕರಾರು ಮಾಡಿಕೊಂಡಿದ್ದು, ಅದರಂತೆ ಸದರಿ ಸಂಸ್ಥೆಗೆ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಬಳಿಯ ಹೆಸರಘಟ್ಟ ಹೋಬಳಿಯ ಮಾವಳ್ಳಿಪುರ ಗ್ರಾಮದ ಸರ್ವೆ ನಂ.8 ರಲ್ಲಿ 46-ಎಕರೆ ಪ್ರದೇಶವನ್ನು ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗಾಗಿ ಒದಗಿಸಲಾಗಿರುತ್ತದೆ.

ಸದರಿ ಪ್ರದೇಶದಲ್ಲಿ ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯು ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ 29-01-2007 ರಿಂದ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಕೆಲಸವನ್ನು ಕೈಗೊಂಡಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಕ್ಕೆ, ಪ್ರತಿದಿನ ಪಾಲಿಕೆ ನಿಗಧಿಪಡಿಸಿರುವ ಗುತ್ತಿಗೆದಾರರು ಮತ್ತು ಪಾಲಿಕೆಯ ಕಾಂಪ್ಯಾಕ್ಟರ್ / ಟಿಪ್ಪರ್ ಲಾರಿ ಮುಂತಾದ ಸುಮಾರು 120 ವಾಹನಗಳ ಮೂಲಕ ಸುಮಾರು 750 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಪಾಲಿಕೆಯ ಯಲಹಂಕ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳ ಹಲವು ಪ್ರದೇಶಗಳಿಂದ ಸಾಗಾಣಿಕೆ ಮಾಡಲಾಗುತ್ತಿದೆ. ಈ ಪೈಕಿ ಸುಮಾರು 80 ವಾಹನಗಳು ಉಲ್ಲೇಖದ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮತ್ತು ಸುಮಾರು 40 ವಾಹನಗಳು ಸಂಭ್ರಮ್ ಕಾಲೇಜ್ ರಸ್ತೆ ಮುಖಾಂತರ ಸಂಚರಿಸುತ್ತವೆ.

ಸದರಿ ಮಾವಳ್ಳಿಪುರ ಘಟಕವು ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಗ್ರಾಮದ ರಸ್ತೆಯಲ್ಲಿ ಸುಮಾರು 4.50 ಕಿ.ಮೀ. ದೂರದಲ್ಲಿರುತ್ತದೆ.

ಈ ಪೈಕಿ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಘನತ್ಯಾಜ್ಯ ಸಂಸ್ಕರಣೆ ಘಟಕದ ಕ್ರಾಸ್‌ವರೆಗಿನ 4.00 ಕಿ.ಮೀ. ಉದ್ದಕ್ಕೆ ಸುಮಾರು 3.00 – 3.50 ಅಗಲದ ಡಾಂಬರ ರಸ್ತೆ ಇದ್ದು, ಉಳಿಕೆ ಕ್ರಾಸ್‌ನಿಂದ ಘಟಕದವರೆಗೆ ಸುಮಾರು 0.50 ಕಿ.ಮೀ. ಉದ್ದದ ಕಚ್ಚಾ ಮಣ್ಣಿನ ರಸ್ತೆ ಇರುತ್ತದೆ. ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ,

S Shashikala
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಕ್ರಾಸ್‌ವರೆಗಿನ ರಸ್ತೆಯು ಕಿರಿದಾಗಿರುವುದೇ ಅಲ್ಲದೆ ರಸ್ತೆಯಲ್ಲಿ ಗುಂಡಿಗಳು ಉಂಟಾಗಿ, ಬದಿಗಳಲ್ಲಿ ಕೊರೆದು ರಸ್ತೆ ಹಾಳಾಗಿರುತ್ತದೆ. ಈ ರಸ್ತೆಯ ಮೂಲಕ ಮಾವಳ್ಳಿಪುರ, ಅಂಗರಾಜಪುರ, ಕೆಂಪನಹಳ್ಳಿ, ಕುರುಬರಹಳ್ಳಿ ಮುಂತಾದ ಇನ್ನೂ ಹಲವು ಗ್ರಾಮಗಳಿಗೆ ಸಂಪರ್ಕ ಇದ್ದು, ಈ ರಸ್ತೆಯಲ್ಲಿ ವಾಹನಗಳು ಎದರು ಬದರು ದಾಟುವುದು (ಕ್ರಾಸಿಂಗ್) ಬಹಳ ಕಷ್ಟಕರವಾಗಿರುತ್ತದೆ. ಅಲ್ಲದೇ ಘನತ್ಯಾಜ್ಯ ಸಾಗಾಣಿಕೆ ವಾಹನಗಳು ಎದುರಾದಾಗ ದ್ವಿಚಕ್ರ ವಾಹನಗಳು ಕ್ರಾಸ್ ಮಾಡಲು ಕಷ್ಟಕರವಾಗಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಮಾವಳ್ಳಿಪುರ ಮತ್ತು ಸುತ್ತಲಿನ ಗ್ರಾಮಸ್ಥರೂ ಕೂಡ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖದ ರಸ್ತೆಯಲ್ಲಿ ಸಂಚರಿಸುವ ಘನತ್ಯಾಜ್ಯ ಸಾಗಾಣಿಕೆ ವಾಹನಗಳ ಮತ್ತು ಈ ಭಾಗದ ಸಾರ್ವಜನಿಕರ ವಾಹನಗಳ ಸುಗಮ ಸಂಚಾರ ಮತ್ತು ಸ್ಥಳೀಯರ ಸುರಕ್ಷತೆ ದೃಷ್ಟಿಯಿಂದ ಉಲ್ಲೇಖದಲ್ಲಿನ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಕ್ರಾಸ್‌ವರೆಗಿನ 4.00 ಕಿ.ಮೀ. ರಸ್ತೆಯನ್ನು ಹಾಲಿ ಸುಮಾರು 3.00 – 3.50 ಅಗಲದಿಂದ ಎರಡು ವಾಹನಗಳು ಒಟ್ಟಿಗೆ ಸಂಚರಿಸಲು ಅನುವಾಗುವಂತೆ ಸುಮಾರು 6.00 – 6.50 ಮೀ. ಗೆ ಅಗಲೀಕರಣಗೊಳಿಸಿ, ಅವಶ್ಯಕ ಜಾಗಗಳಲ್ಲಿ ಮೋರಿಗಳನ್ನು ನಿರ್ಮಿಸಿ ಅಭಿವೃದ್ಧಿಗೊಳಿಸಲು ಅಂದಾಜು ಪಟ್ಟಿಯನ್ನು 2012-13ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.200.00 ಲಕ್ಷಗಳಾಗಿರುತ್ತದೆ. ಕ್ರಾಸ್‌ನಿಂದ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಘಟಕದವರೆಗಿನ ಕಚ್ಚಾ ರಸ್ತೆ ಇರುವ ಜಮೀನಿನ ತಗಾದೆಯು ನ್ಯಾಯಾಲಯದಲ್ಲಿರುವುದರಿಂದ ಈ ಭಾಗದ ಅಭಿವೃದ್ಧಿಗೆ ಯೋಜಿಸಿರುವುದಿಲ್ಲ.

ಸದರಿ ಕಾಮಗಾರಿಗೆ 2012-13ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದ ಲೆಕ್ಕಶೀರ್ಷಿಕೆ P0935 Approach roads to landfill sites ಅಡಿಯಲ್ಲಿ ರೂ.200.00 ಲಕ್ಷಗಳ ಅನುದಾನ ಒದಗಿಸಿ ಕಾಮಗಾರಿ ಸಂಖ್ಯೆಯನ್ನು ನೀಡಲಾಗಿರುತ್ತದೆ.

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ದಿನಾಂಕ: 16-07-2012 ರಂದು ನಡೆದ ಸಭೆಯ ನಡವಳಿಯ ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ./23/2012-13 ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕದ ಕ್ರಾಸ್‌ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ದಿನಾಂಕ: 02-11-2012 ರಂದು e-procurement ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿರುತ್ತದೆ.

ಅಂದಾಜು ಮೊತ್ತ ರೂ.200.00 ಲಕ್ಷಗಳು

ಟೆಂಡರ್‌ಗಿಟ್ಟ ಮೊತ್ತ ರೂ.199.86.169.00

- ಖಾಲಿ ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿ ಕೊಳ್ಳುವ ದಿನಾಂಕ: 02-11-2012 ರ 4.00 ಗಂಟೆಯ ನಂತರ.
- ಪ್ರೀ ಬಿಡ್ ಪ್ರಶ್ನೆಗಳನ್ನು ಕೇಳಲು 09-11-2012 ಸಂಜೆ 4.00 ಗಂಟೆಯವರೆಗೆ.
- ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 16-11-2012 ಸಂಜೆ 4.00 ಗಂಟೆಯವರೆಗೆ.

ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕದ ಕ್ರಾಸ್‌ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಅನ್ನು ದೈನಂದಿನ ಪತ್ರಿಕೆಗಳಾದ ವಿಜಯ ಕರ್ನಾಟಕ ಮತ್ತು ಡೆಕ್ಕನ್ ಹೆರಾಲ್ಡ್‌ನಲ್ಲಿ ದಿನಾಂಕ: 03-11-2012 ರಂದು ಪ್ರಕಟಿಸಲಾಗಿರುತ್ತದೆ. ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲೂ ಸಹ ಸದರಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

S Shelhk

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕದ ಕ್ರಾಸ್‌ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ತಾಂತ್ರಿಕ ಬಿಡ್ ಅನ್ನು ದಿನಾಂಕ: 20-11-2012 ರಂದು ತೆರೆಯಲಾಗಿರುತ್ತದೆ. ಭಾಗವಹಿಸಿದ ಬಿಡ್ಡುದಾರರು ಮತ್ತು ಅವರು ಪೂರೈಸಿರುವ ಟೆಂಡರ್ ಷರತ್ತುಗಳ ವಿವರಗಳ ತಃಖ್ತೆಯನ್ನು ಕಡತದಲ್ಲಿ ಲಗತ್ತಿಸಿದೆ.

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಒಟ್ಟು 03 (ಮೂರು) ಬಿಡ್ಡುದಾರರ ಅರ್ಹತಾ ವಿವರಗಳು ಕೆಳಗಿನಂತಿರುತ್ತದೆ.

1. ಶ್ರೀ.ಸಿ.ಜಿ.ಚಂದ್ರಪ್ಪ, 1ನೇ ದರ್ಜೆ ಗುತ್ತಿಗೆದಾರರು, ಈ ಗುತ್ತಿಗೆದಾರರು ಎಲ್ಲಾ ಅರ್ಹತಾ ಷರತ್ತುಗಳನ್ನು ಪೂರೈಸಿರುತ್ತಾರೆ ಮತ್ತು ಅವಶ್ಯ ದಾಖಲೆಗಳನ್ನು Upload ಮಾಡಿರುತ್ತಾರೆ.

2. SLP Infra Engineers Pvt. Ltd., 1ನೇ ದರ್ಜೆ ಗುತ್ತಿಗೆದಾರರು, ಈ ಗುತ್ತಿಗೆದಾರರು ಕೆಲವು ಅರ್ಹತಾ ಷರತ್ತುಗಳನ್ನು ಪೂರೈಸಿರುತ್ತಾರೆ ಮತ್ತು ಅವಶ್ಯ ದಾಖಲೆಗಳನ್ನು Upload ಮಾಡಿರುವುದಿಲ್ಲ.

3. ಶ್ರೀ.ಪ್ರಮೋದ್ ಜೆ. (ಕಾರ್ತಿಕ್ ಎಂಟರ್ ಪ್ರೈಸೆಸ್), 1ನೇ ದರ್ಜೆ ಗುತ್ತಿಗೆದಾರರು, ಈ ಗುತ್ತಿಗೆದಾರರು ಎಲ್ಲಾ ಅರ್ಹತಾ ಷರತ್ತುಗಳನ್ನು ಪೂರೈಸಿರುತ್ತಾರೆ ಮತ್ತು ಅವಶ್ಯ ದಾಖಲೆಗಳನ್ನು Upload ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ, ಕ್ರಮ ಸಂಖ್ಯೆ-(1) ಮತ್ತು (3) ರ ಬಿಡ್ಡುದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು ಟೆಂಡರ್ ಪ್ರಕ್ರಿಯೆಯಲ್ಲಿ ಮುಂದುವರೆಯಲು ಅರ್ಹತೆ ಹೊಂದಿರುತ್ತಾರೆ.

ಮೇಲೆ ವಿವರಿಸಿರುವಂತೆ ತಾಂತ್ರಿಕ ಬಿಡ್‌ನ ವಿವರಗಳನ್ನು ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಮುಖ್ಯ ಅಭಿಯಂತರರು, ಘ.ತ್ಯಾ.ನಿ.-1 ರವರಿಗೆ ಸಲ್ಲಿಸಿ ಅವರ ಅನುಮೋದನೆ ಪಡೆದು, ಕ್ರಮ ಸಂಖ್ಯೆ-(1) ಮತ್ತು (3) ರ ಬಿಡ್ಡುದಾರರ ಆರ್ಥಿಕ ಬಿಡ್ಡುಗಳನ್ನು ತೆರೆದು ಪರಿಶೀಲಿಸಲಾಗಿರುತ್ತದೆ.

ಕ್ರಮ ಸಂಖ್ಯೆ-(1) ರ ಬಿಡ್ಡದಾರರಾದ ಶ್ರೀ.ಸಿ.ಜಿ.ಚಂದ್ರಪ್ಪ ಇವರು ನಮೂದಿಸಿರುವ ಬಿಡ್ಡಿನ ಒಟ್ಟು ಮೊತ್ತವು ರೂ.197,49,305/- ಗಳಾಗಿದ್ದು, 2012-13ನೇ ಸಾಲಿನ ದರಪಟ್ಟಿ ಆಧಾರಿತ ಮಂಜೂರಾದ ಅಂದಾಜು ಪಟ್ಟಿ ದರಗಳಿಗೆ ಹೋಲಿಸಿದ್ದಲ್ಲಿ ಶೇ.1.19 ರಷ್ಟು ಕಡಿಮೆ ಇರುತ್ತದೆ.

ಕ್ರಮ ಸಂಖ್ಯೆ-(3) ರ ಬಿಡ್ಡುದಾರರಾದ ಶ್ರೀ.ಪ್ರಮೋದ್ ಜೆ. ರವರು ನಮೂದಿಸಿರುವ ಬಿಡ್ಡಿನ ಮೊತ್ತವು ರೂ.1,97,97,600/- ಗಳಗಾಗಿದ್ದು, 2012-13ನೇ ಸಾಲಿನ ದರಪಟ್ಟಿ ಆಧಾರಿತ ಮಂಜೂರಾದ ಅಂದಾಜು ಪಟ್ಟಿ ದರಗಳಿಗೆ ಹೋಲಿಸಿದ್ದಲ್ಲಿ ಶೇ.0.92 ರಷ್ಟು ಕಡಿಮೆ ಇರುತ್ತದೆ.

ಮೇಲಿನ ಎರಡು ಬಿಡ್ಡುದಾರರ ಬಿಡ್ಡುಗಳನ್ನು ತುಲನೆ ಮಾಡಿದ್ದಲ್ಲಿ ಶ್ರೀ.ಸಿ.ಜಿ.ಚಂದ್ರಪ್ಪ, 1ನೇ ದರ್ಜೆ ಗುತ್ತಿಗೆದಾರರವರು ನಮೂದಿಸಿರುವ ಬಿಡ್ಡಿನ ಮೊತ್ತವು ಕಡಿಮೆ ಇದ್ದು, ಇವರು ಅರ್ಹ L1 ಬಿಡ್ಡುದಾರರಾಗಿರುತ್ತಾರೆ.

ಮೇಲಿನಂತೆ ಆರ್ಥಿಕ ಬಿಡ್ಡಿನ ವಿವರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮುಖ್ಯ ಅಭಿಯಂತರರು, ಘ.ತ್ಯಾ.ನಿ.-1 ವಿಶೇಷ ಆಯುಕ್ತರು (ಯೋಜನೆ) ಹಾಗೂ ಮಾನ್ಯ ಆಯುಕ್ತರು ರವರಿಗೆ ಸಲ್ಲಿಸಿ ಅನುಮೋದನೆ ಪಡೆಯಲಾಗಿರುತ್ತದೆ. (ವಿವರಗಳನ್ನು ಕಡತದಲ್ಲಿ ಲಗತ್ತಿಸಿದೆ).

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಸದರಿ ಇ-ಪ್ರೋಕ್ಯೂರ್‌ಮೆಂಟ್ ಅಡಿಯ ದ್ವಿಲಕೋಟೆ ಪದ್ಧತಿಯ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಅರ್ಹ L1 ಗುತ್ತಿಗೆದಾರರಾದ ಶ್ರೀ.ಸಿ.ಜಿ.ಚಂದ್ರಪ್ಪ, 1ನೇ ದರ್ಜೆ ಗುತ್ತಿಗೆದಾರರು

S Shalhhhhy

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನಮೂದಿಸಿರುವ ಬಿಡ್ಡು ಮೊತ್ತ ರೂ.197,49,305/- ಗಳ, 2012-13ನೇ ಸಾಲಿನ ದರಪಟ್ಟಿ ಆಧಾರಿತ ಮಂಜೂರಾದ ಅಂದಾಜು ಪಟ್ಟಿಗೆ ಹೋಲಿಸಿದಲ್ಲಿ ಶೇ.1.19 ರಷ್ಟು ಕಡಿಮೆ ದರಗಳ ಟೆಂಡರ್ ಅನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:-** ಸಭೆಯಲ್ಲಿ ಹಾಜರಿದ್ದ ಮುಖ್ಯ ಅಭಿಯಂತರರೊಂದಿಗೆ ಚರ್ಚಿಸಲಾಯಿತು. ಸದರಿ ಘನತ್ಯಾಜ್ಯ ವಿಲೇವಾರಿ ಘಟಕ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿರುವುದರಿಂದ ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಮೂಲಭೂತ ಸೌಕರ್ಯ ಒದಗಿಸುವ ಅಗತ್ಯತೆ ಬಗ್ಗೆ ವರದಿಯೊಂದಿಗೆ ಕಡತವನ್ನು ಸಮಿತಿಯ ಮುಂದೆ ಮರುಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

**ವಿಷಯದ ಸಂಖ್ಯೆ: ಸಾಆಸ್ಥಾಸ/87/2012-13:**

ದಿನಾಂಕ: 27-02-2013 ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಣತ್ಯಾಜ್ಯ ಸಂಗ್ರಹಣಾ ಘಟಕ ನಿರ್ಮಾಣ ಮಾಡುವ ಕಾಮಗಾರಿಗೆ ಮಾನ್ಯ ಆಯುಕ್ತರರು ಅನುಮೋದನೆ ನೀಡಿದ್ದು ಹಾಗೂ ಸದರಿ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು 13th Finance for Solid Waste Management Govt. Order HVD 356 MNG 2012, Dt. 10-07-2012 ಅಡಿಯಲ್ಲಿ ಭರಿಸಲು ಸೂಚಿಸಿರುವ ಮೇರೆಗೆ, ಈ ಕೆಳಕಂಡ ಕಾಮಗಾರಿಗಳಿಗೆ ರೂ.149.91 ಲಕ್ಷಗಳಿಗೆ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಲಾಗಿದೆ. ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಲಾಗಿದೆ.

ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ.

| Sl. No. | Name of the Division | Name of the work | Est. Cost |
|---|---|---|---|
| 01 | Vijayanagara | Construction of Dry waste collection center at Galianjaneya Temple in Ward No.157 | 10.00 |
| 02 | Vijayanagara | Construction of Dry waste collection center at Vijayanagara in Ward No.123 | 10.00 |
| 03 | Vijayanagara | Construction of Dry waste collection center at Gangondanahalli in Ward No.132 | 10.00 |
| 04 | Vijayanagara | Construction of Dry waste collection center at Railway Parallel road in Ward No.133 | 10.00 |
| 05 | Vijayanagara | Construction of Dry waste collection center at Railway Parallel road in Ward No.134 | 10.00 |
| 06 | Vijayanagara | Construction of Dry waste collection center at Hosahalli in Ward No.124 | 10.00 |
| 07 | Vijayanagara | Construction of Dry waste collection center at Depanjalinagara in Ward No.134 | 10.00 |
| 08 | BTM Layout | Dry waste collection and sorting center at BBMP vacant site at Mahalingeshwara layout in Ward No.146 | 10.00 |
| 09 | BTM Layout | Dry waste collection and sorting center at BBMP vacant site at Mahalingeshwara layout in Ward No.152 | 10.00 |
| 10 | Jayanagar | Construction of Segregation unit at 4th main 3rd Block Jayanagar BBMP property in Ward No.168 | 10.00 |
| 11 | Jayanagar | Construction of Segregation at 46th cross, Marenahalli 4th "T" Block Jayanagar in Ward No.168 | 10.00 |
| 12 | Jayanagar | Construction of Segregation unit at Maruthi Layout Park at Ward No.171 | 10.00 |
| 13 | Padmanabhanagara | Construction of Dry waste collection center at Vacant | 9.97 |

S Shobha [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | | |
|---|---|---|---|
| | | Site of Kaverinagara in Ward No.166 | |
| 14 | Padmanabhanagara | Construction of Dry waste collection center at Vacant Site of Back side to Ward Office in Ward No.165 | 9.97 |
| 15 | Padmanabhanagara | Construction of Dry waste collection center at Umarbhag Layout in Ward No.180 | 9.97 |
| **TOTAL (Rs. in lakhs)** | | | **149.91** |

ಮೇಲ್ಕಂಡ ಕಾಮಗಾರಿಗಳಿಗೆ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ಮತ್ತು ಈಗಾಗಲೇ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸುತ್ತಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:-** ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ 27/2/13ರ ಟಿಪ್ಪಣಿಯನ್ನು ಒಪ್ಪಲು ಸಮಿತಿ ತೀರ್ಮಾನಿಸಿತು.

**ವಿಷಯದ ಸಂಖ್ಯೆ: ಸಾಆಸ್ಥಾಸ/88/2012-13:**

ದಿನಾಂಕ: 27-02-2013 ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಣತ್ಯಾಜ್ಯ ಸಂಗ್ರಹಣಾ ಘಟಕ ನಿರ್ಮಾಣ ಮಾಡುವ ಕಾಮಗಾರಿಗೆ ಮಾನ್ಯ ಆಯುಕ್ತರರು ಅನುಮೋದನೆ ನೀಡಿದ್ದು ಹಾಗೂ ಸದರಿ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು 13th Finance for Solid Waste Management Govt. Order HVD 356 MNG 2012, Dt. 10-07-2012 ಅಡಿಯಲ್ಲಿ ಭರಿಸಲು ಸೂಚಿಸಿರುವ ಮೇರೆಗೆ, ಈ ಕೆಳಕಂಡ ಕಾಮಗಾರಿಗಳಿಗೆ ರೂ.89.73 ಲಕ್ಷಗಳಿಗೆ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಲಾಗಿದೆ. ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಲಾಗಿದೆ.

ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ.

| Sl. No. | Name of the Division | Name of the work | Est. Cost |
|---|---|---|---|
| 01 | Chickpet | Construction of Dry waste collection center in Ward No.118 | 9.97 |
| 02 | Chickpet | Construction of Dry waste collection center at Kalasipalya near Ayyappa Swami Temple in Ward No.119 | 9.97 |
| 03 | Chickpet | Construction of Dry waste collection center at buleyward park KR road in Ward No.142 | 9.97 |
| 04 | Chickpet | Construction of Dry waste collection center at New high school road in Ward No.143 | 9.97 |
| 05 | Chickpet | Construction of Dry waste collection center at beside Mallige hospital in Ward No.144 | 9.97 |
| 06 | Chickpet | Construction of Dry waste collection center at Bande slum in Ward No.145 | 9.97 |
| 07 | Chickpet | Construction of Dry waste collection center in Ward No.153 | 9.97 |
| 08 | Padmanabhanagara | Construction of Dry waste collection center at Hosakerehalli in Ward No.161 | 9.97 |
| 09 | Padmanabhanagara | Construction of Dry waste collection center at Chikkakallasandrain Ward No.183 | 9.97 |
| **TOTAL (Rs. in lakhs)** | | | **89.73** |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲ್ಕಂಡ ಕಾಮಗಾರಿಗಳಿಗೆ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ಮತ್ತು ಈಗಾಗಲೇ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸುತ್ತಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ**:- ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ 27/2/13ರ ಟಿಪ್ಪಣಿಯನ್ನು ಒಪ್ಪಲು ಸಮಿತಿ ತೀರ್ಮಾನಿಸಿತು.

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/01/13-14**

ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ 25-07-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯದ ಪೈಕಿ ಪ್ರತಿ ದಿನ 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವ ಘಟಕವನ್ನು ಬಿ.ಓ.ಓ.ಟಿ ಆಧಾರದಲ್ಲಿ ಸ್ಥಾಪಿಸಲು ಪಾಲಿಕೆಯು ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಕರಾರನ್ನು ಮಾಡಿಕೊಂಡಿದ್ದು, ಅದರಂತೆ ಮಾವಳ್ಳಿಪುರ ಸರ್ವೆ ನಂ.08ರ ಪಾಲಿಕೆಯ ಜಾಗದಲ್ಲಿ ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಸದರಿ ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯವರು 29-01-2007 ರಲ್ಲಿ ಸ್ಥಾಪಿಸಿ, ಪ್ರತಿದಿನ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುತ್ತಿರುತ್ತಾರೆ. ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವಾಗ ವಾಸನೆ ಹೊರಹೊಮ್ಮುತ್ತಿದ್ದು ಇದರಿಂದ ನೊಣ, ಸೊಳ್ಳೆಗಳು, ಹದ್ದುಗಳ ಹಾವಳಿ ಮತ್ತು ನಾಯಿಗಳ ಹಾವಳಿ ಉಂಟಾಗಿ ಇದರಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿ ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿರುತ್ತಾರೆ.

ಮೇಲಿನಂತೆ ಸದರಿ ಟೆಂಡರ್‌ನ ಆರ್ಥಿಕ ಬಿಡ್‌ಅನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನ ಸಮುಚಿತ ಮಾರ್ಗದಲ್ಲಿ ಸಲ್ಲಿಸಲಾಗಿದ್ದು, ಭಾಗವಹಿಸಿರುವ ಮೂವರು ಬಿಡ್ಡುದಾರರ ಪೈಕಿ ಮೆ॥ ಕಾರ್ತಿಕ್ ಎಂಟರ್ ಪ್ರೈಸೆಸ್, 1ನೇ ದರ್ಜೆ ಗುತ್ತಿಗೆದಾರರು ಎಲ್ಲಾ ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು, ಅರ್ಹ L1 ಬಿಡ್ಡುದಾರರಾಗಿರುವ ಹಿನ್ನೆಲೆಯಲ್ಲಿ, ಸದರಿಯವರ ಆರ್ಥಿಕ ಬಿಡ್‌ಗೆ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಇಬ್ಬರು ಬಿಡ್ಡುದಾರರ ಪೈಕಿ ಅರ್ಹ L1 ಗುತ್ತಿಗೆದಾರರಾದ ಮೆ॥ ಕಾರ್ತಿಕ್ ಎಂಟರ್ ಪ್ರೈಸೆಸ್, 1ನೇ ದರ್ಜೆ ರವರ ಮೊತ್ತ ರೂ. 222,70,130-00 (ಪ್ರಸಕ್ತ ಸಾಲಿನ ದರಗಳಿಗೆ ಹೋಲಿಸಿದಲ್ಲಿ ಶೇ.6.47 ಕಡಿಮೆ) ಗಳ ಟೆಂಡರ್‌ಗೆ ಅನುಮೋದನೆ ಕೋರಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ಮುಂದೂಡಿದೆ

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/02/13-14**

ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ 24-05-13ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 4,500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ತ್ಯಾಜ್ಯವನ್ನು ಹಿಂದೆ ಮಾವಳ್ಳಿಪುರ, ಚೀಮಸಂದ್ರ, ಸುಬ್ಬರಾಯನಪಾಳ್ಯ, ಅಂಜನಪುರ, ಕಲ್ಲುಗಣಿ, ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ (ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್), ಮಂಡೂರು (ಉತ್ತರ) ಮತ್ತು ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು.

1. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.407.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.

2. ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.407.50 ಲಕ್ಷಗಳಿಗೆ ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ0935 Approach roads ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ.

ಮುಂದೂಡಿದೆ

S Shaktivel

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/03/13-14**

ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು)ರವರ ದಿನಾಂಕ 24-5-2013ರಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 4,500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ತ್ಯಾಜ್ಯವನ್ನು ಹಿಂದೆ ಮಾವಳ್ಳಿಪುರ, ಚೀಮಸಂದ್ರ, ಸುಬ್ಬರಾಯನಪಾಳ್ಯ, ಅಂಜನಪುರ, ಕಲ್ಲುಗಣಿ, ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ (ಮೆ॥ ಟೆರ್ರಾ ಫಾರ್ಮ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್), ಮಂಡೂರು (ಉತ್ತರ) ಮತ್ತು ಮಂಡೂರು (ದಕ್ಷಿಣ) ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಎರಡು (2) ಕಾಮಗಾರಿಗಳಿಗೆ ಕೆಳಗಿನವುಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ:24-05-2013ರ ಟಿಪ್ಪಣಿ.

1. ಪ್ರಸ್ತಾಪಿತ ಎರಡು (2) ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.274.10 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಗಳ ಅಂದಾಜು ಮೊತ್ತ ರೂ.274.10 ಲಕ್ಷಗಳಿಗೆ ಪಾಲಿಕೆಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ0935 Approach roads ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ.

ಮುಂದೂಡಿದೆ

**ವಿಷಯದ ಸಂಖ್ಯೆ: ಸಾಆಸ್ಥಾಸ/93/2012-13:**

ದಿನಾಂಕ: 13-03-2013 ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಣತ್ಯಾಜ್ಯ ಸಂಗ್ರಹಣಾ ಘಟಕ ನಿರ್ಮಾಣ ಮಾಡುವ ಕಾಮಗಾರಿಗೆ ಮಾನ್ಯ ಆಯುಕ್ತರು ಅನುಮೋದನೆ ನೀಡಿದ್ದು ಹಾಗೂ ಸದರಿ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು 13th Finance for Solid Waste Management Govt. Order HVD 356 MNG 2012 Dt. 10-07-2012 ಅಡಿಯಲ್ಲಿ ಭರಿಸಲು ಸೂಚಿಸಿರುವ ಮೇರೆಗೆ, ಈ ಕೆಳಕಂಡ ಕಾಮಗಾರಿಗಳಿಗೆ ರೂ.19.94 ಲಕ್ಷಗಳಿಗೆ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲು ಕೋರಲಾಗಿದೆ. ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಲಾಗಿದೆ.

ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ.

| Sl. No. | Name of the Division | Name of the Work | Est. Cost |
|---|---|---|---|
| 01 | Padmanabhanagar | Construction of Dry Waste Collection Center at in Ward No.182 | 9.97 |
| 02 | Padmanabhanagar | Construction of Dry Waste Collection Center at Ward No.181 | 9.97 |
| | | **Total (Rs. in lakhs)** | **19.94** |

ಮೇಲ್ಕಂಡ ಕಾಮಗಾರಿಗಳಿಗೆ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ಮತ್ತು ಈಗಾಗಲೇ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸುತ್ತಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

<u>ನಿರ್ಣಯ:-</u> ವಿಶೇಷ ಆಯುಕ್ತರು (ಯೋಜನೆ)ರವರ ದಿ.13/3/13ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

S Shalhabh

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/10/13-14

ದಿನಾಂಕ: 25-07-2013 ರ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯದ ಪೈಕಿ ಪ್ರತಿ ದಿನ 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವ ಘಟಕವನ್ನು ಬಿ.ಓ.ಓ.ಟಿ ಆಧಾರದಲ್ಲಿ ಸ್ಥಾಪಿಸಲು ಪಾಲಿಕೆಯು ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಕರಾರನ್ನು ಮಾಡಿಕೊಂಡಿದ್ದು, ಅದರಂತೆ ಮಾವಳ್ಳಿಪುರ ಸರ್ವೆ ನಂ.08ರ ಪಾಲಿಕೆಯ ಜಾಗದಲ್ಲಿ ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಸದರಿ ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯವರು 29-01-2007 ರಲ್ಲಿ ಸ್ಥಾಪಿಸಿ, ಪ್ರತಿದಿನ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುತ್ತಿರುತ್ತಾರೆ. ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವಾಗ ವಾಸನೆ ಹೊರಹೊಮ್ಮುತ್ತಿದ್ದು ಇದರಿಂದ ನೊಣ, ಸೊಳ್ಳೆಗಳು, ಹದ್ದುಗಳ ಹಾವಳಿ ಮತ್ತು ನಾಯಿಗಳ ಹಾವಳಿ ಉಂಟಾಗಿ ಇದರಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿ ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿರುತ್ತಾರೆ.

ಮುಂದುವರೆದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ತ್ಯಾಜ್ಯವು ಪೂರ್ಣವಾಗಿ ಸಂಸ್ಕರಣೆಯಾಗುತ್ತಿರುವುದಿಲ್ಲವೆಂದು ಹಾಗೂ ಲೀಚೆಟ್ ಅನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಮಾವಳ್ಳಿಪುರ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದರ ಮೇರೆಗೆ ದಿನಾಂಕ: 12-07-2012 ರಿಂದ ಸದರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತಯ್ಯ ಉಂಟಾಗಿ ತ್ಯಾಜ್ಯ ವಿಲೇವಾರಿಯು ಒಂದು ಸಮಸ್ಯೆಯಾಗಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ನಿಟ್ಟಿನಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು ದಿನಾಂಕ: 22-08-2012 ರಂದು ಪಾಲಿಕೆಯ ಸಭಾಂಗಣದಲ್ಲಿ ಪೂಜ್ಯ ಮಹಾಪೌರರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ಯಲಹಂಕ ಕ್ಷೇತ್ರದ ಶಾಸಕರು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸೂಕ್ತವಾಗಿ ಅಭಿವೃದ್ಧಿಗೊಳಿಸಿ ಪುನರಾರಂಭಿಸಲು ಹಾಗೂ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ.800.00 ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಸೂಚಿಸಿರುತ್ತಾರೆ.

ಅದರಂತೆ ವಿಷಯ ಸಂಖ್ಯೆ: 230/2012-13 ದಿನಾಂಕ: 30-08-2012 ರಲ್ಲಿ ಪಾಲಿಕೆಯ ಸಭೆಯಲ್ಲಿ ನಿರ್ಣಯವೊಂದನ್ನು ಕೈಗೊಂಡು ದಿನಾಂಕ: 22-08-2012 ರ ಮಾನ್ಯ ಉಪ ಮುಖ್ಯ ಮಂತ್ರಿಗಳು ಸೂಚಿಸಿದಂತೆ ರೂ.800.00 ಲಕ್ಷಗಳ ಅನುದಾನ ಒದಗಿಸಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಮುಂದೂಡಿದೆ.

## ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/11/13-14

ದಿನಾಂಕ: 25-07-2013 ರ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯದ ಪೈಕಿ ಪ್ರತಿ ದಿನ 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವ ಘಟಕವನ್ನು ಬಿ.ಓ.ಓ.ಟಿ ಆಧಾರದಲ್ಲಿ ಸ್ಥಾಪಿಸಲು ಪಾಲಿಕೆಯು ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಕರಾರನ್ನು

S Shekhar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾಡಿಕೊಂಡಿದ್ದು, ಅದರಂತೆ ಮಾವಳ್ಳಿಪುರ ಸರ್ವೆ ನಂ.೦೪ರ ಪಾಲಿಕೆಯ ಜಾಗದಲ್ಲಿ ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಸದರಿ ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯವರು 29-01-2007 ರಲ್ಲಿ ಸ್ಥಾಪಿಸಿ, ಪ್ರತಿದಿನ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುತ್ತಿರುತ್ತಾರೆ. ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವಾಗ ವಾಸನೆ ಹೊರಹೊಮ್ಮುತ್ತಿದ್ದು ಇದರಿಂದ ನೊಣ, ಸೊಳ್ಳೆಗಳು, ಹದ್ದುಗಳ ಹಾವಳಿ ಮತ್ತು ನಾಯಿಗಳ ಹಾವಳಿ ಉಂಟಾಗಿ ಇದರಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿ ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿರುತ್ತಾರೆ.

ಮುಂದುವರೆದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ತ್ಯಾಜ್ಯವು ಪೂರ್ಣವಾಗಿ ಸಂಸ್ಕರಣೆಯಾಗುತ್ತಿರುವುದಿಲ್ಲವೆಂದು ಹಾಗೂ ಲೀಚೆಟ್ ಅನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಮಾವಳ್ಳಿಪುರ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದರ ಮೇರೆಗೆ ದಿನಾಂಕ: 12-07-2012 ರಿಂದ ಸದರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತಯ್ಯ ಉಂಟಾಗಿ ತ್ಯಾಜ್ಯ ವಿಲೇವಾರಿಯು ಒಂದು ಸಮಸ್ಯೆಯಾಗಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ನಿಟ್ಟಿನಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು ದಿನಾಂಕ: 22-08-2012 ರಂದು ಪಾಲಿಕೆಯ ಸಭಾಂಗಣದಲ್ಲಿ ಪೂಜ್ಯ ಮಹಾಪೌರರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ಯಲಹಂಕ ಕ್ಷೇತ್ರದ ಶಾಸಕರು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸೂಕ್ತವಾಗಿ ಅಭಿವೃದ್ಧಿಗೊಳಿಸಿ ಪುನರಾರಂಭಿಸಲು ಹಾಗೂ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ.೮೦೦.೦೦ ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಸೂಚಿಸಿರುತ್ತಾರೆ.

ಅದರಂತೆ ವಿಷಯ ಸಂಖ್ಯೆ: 230/2012-13 ದಿನಾಂಕ: 30-08-2012 ರಲ್ಲಿ ಪಾಲಿಕೆಯ ಸಭೆಯಲ್ಲಿ ನಿರ್ಣಯವೊಂದನ್ನು ಕೈಗೊಂಡು ದಿನಾಂಕ: 22-08-2012 ರ ಮಾನ್ಯ ಉಪ ಮುಖ್ಯ ಮಂತ್ರಿಗಳು ಸೂಚಿಸಿದಂತೆ ರೂ.೮೦೦.೦೦ ಲಕ್ಷಗಳ ಅನುದಾನ ಒದಗಿಸಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಮುಂದೂಡಿದೆ.

## ವಿಷಯದ ಸಂಖ್ಯೆ: ಸಾ.ಆ.ಸ್ಥಾ.ಸ/12/13-14

ದಿನಾಂಕ: 30-09-2013 ರ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯದ ಪೈಕಿ ಪ್ರತಿ ದಿನ 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುವ ಘಟಕವನ್ನು ಬಿ.ಓ.ಓ.ಟಿ ಆಧಾರದಲ್ಲಿ ಸ್ಥಾಪಿಸಲು ಪಾಲಿಕೆಯು ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಲ್ಲಿ ಕರಾರನ್ನು ಮಾಡಿಕೊಂಡಿದ್ದು, ಅದರಂತೆ ಮಾವಳ್ಳಿಪುರ ಸರ್ವೆ ನಂ.೦೪ರ ಪಾಲಿಕೆಯ ಜಾಗದಲ್ಲಿ ಘನತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಘಟಕವನ್ನು ಸದರಿ ಮೆ॥ ರಾಮ್ಕಿ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯವರು 29-01-2007 ರಲ್ಲಿ ಸ್ಥಾಪಿಸಿ, ಪ್ರತಿದಿನ ಘನತ್ಯಾಜ್ಯವನ್ನು ಸ್ವೀಕರಿಸಿ ಸಂಸ್ಕರಿಸುತ್ತಿರುತ್ತಾರೆ. ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವಾಗ ವಾಸನೆ ಹೊರಹೊಮ್ಮುತ್ತಿದ್ದು ಇದರಿಂದ ನೊಣ, ಸೊಳ್ಳೆಗಳು, ಹದ್ದುಗಳ ಹಾವಳಿ ಮತ್ತು ನಾಯಿಗಳ ಹಾವಳಿ ಉಂಟಾಗಿ ಇದರಿಂದಾಗಿ ಸ್ಥಳೀಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿ ತ್ಯಾಜ್ಯ ವಿಲೇವಾರಿಗೆ ಅಡ್ಡಿಪಡಿಸಿರುತ್ತಾರೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮುಂದುವರೆದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ತ್ಯಾಜ್ಯವು ಪೂರ್ಣವಾಗಿ ಸಂಸ್ಕರಣೆಯಾಗುತ್ತಿರುವುದಿಲ್ಲವೆಂದು ಹಾಗೂ ಲೀಚೆಟ್ ಅನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಮಾವಳ್ಳಿಪುರ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸುವಂತೆ ಸೂಚಿಸಿದ್ದರ ಮೇರೆಗೆ ದಿನಾಂಕ: 12-07-2012 ರಿಂದ ಸದರಿ ಘಟಕದಲ್ಲಿ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತಯ್ಯ ಉಂಟಾಗಿ ತ್ಯಾಜ್ಯ ವಿಲೇವಾರಿಯು ಒಂದು ಸಮಸ್ಯೆಯಾಗಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಪುನರಾರಂಭಿಸುವ ನಿಟ್ಟಿನಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು ದಿನಾಂಕ: 22-08-2012 ರಂದು ಪಾಲಿಕೆಯ ಸಭಾಂಗಣದಲ್ಲಿ ಪೂಜ್ಯ ಮಹಾಪೌರರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ಯಲಹಂಕ ಕ್ಷೇತ್ರದ ಶಾಸಕರು ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸೂಕ್ತವಾಗಿ ಅಭಿವೃದ್ಧಿಗೊಳಿಸಿ ಪುನರಾರಂಭಿಸಲು ಹಾಗೂ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ.೮೦೦.೦೦ ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಸೂಚಿಸಿರುತ್ತಾರೆ.

ಅದರಂತೆ ವಿಷಯ ಸಂಖ್ಯೆ: 230/2012-13 ದಿನಾಂಕ: 30-08-2012 ರಲ್ಲಿ ಪಾಲಿಕೆಯ ಸಭೆಯಲ್ಲಿ ನಿರ್ಣಯವೊಂದನ್ನು ಕೈಗೊಂಡು ದಿನಾಂಕ: 22-08-2012 ರ ಮಾನ್ಯ ಉಪ ಮುಖ್ಯ ಮಂತ್ರಿಗಳು ಸೂಚಿಸಿದಂತೆ ರೂ.೮೦೦.೦೦ ಲಕ್ಷಗಳ ಅನುದಾನ ಒದಗಿಸಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಮುಂದೂಡಿದೆ

S Shashirekha

(ಎಸ್. ಶಶಿರೇಖಾ ಜಯರಾಮ್)

ಅಧ್ಯಕ್ಷರು

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ

ಪ್ರತಿಯನ್ನು :

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2. ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3. ಆಡಳಿತ ಪಕ್ಷ/ವಿರೋಧ ಪಕ್ಷ ಮತ್ತು ಜೆ.ಡಿ.ಎಸ್. ಪಕ್ಷದ ನಾಯಕರುಗಳ ಆಪ್ತ ಸಹಾಕರುಗಳಿಗೆ ಕಳುಹಿಸುತ್ತಾ ಮಾನ್ಯ ನಾಯಕರುಗಳ ಅವಗಾನೆಗೆ ತರಲು ಕೋರಿದೆ.
4. ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಕಳುಹಿಸಿದೆ.
5. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿದೆ.
7. ಕಛೇರಿ ಕಡತಕ್ಕೆ.

S Shashirekha

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು